
ಪರಿಯಾಗಿತ್ತು. ಈ ಹುಡುಕಾಟದಲ್ಲಿ ಹೆಚ್ಚೆಚ್ಚು ಆಳಕ್ಕೆ ಹೋದಂತೆ, ಮತ್ತು ಎತ್ತರಕ್ಕೆ ಏರಿದಂತೆ ಇದರಿಂದ ಹೊಮ್ಮಿದ ಸಂಗೀತ ಹೆಚ್ಚೆಚ್ಚು ಅರ್ಥಪೂರ್ಣವಾಗುತ್ತಾ ಹೋಗುತ್ತಿತ್ತು. ಇವರು ತಮ್ಮ ಬದುಕಿನ ಕೊನೆಯ ಕ್ಷಣದ ತನಕ ಸವಾಲುಗಳನ್ನು ಹಾಕಿಕೊಳ್ಳುತ್ತಾ ಅದಕ್ಕೆ ಪರಿಹಾರ ಕಂಡುಕೊಳ್ಳುತ್ತಾ ರಾಗದ ಹಾಗೂ ಅದನ್ನು ವಾದ್ಯದಲ್ಲಿ ಮೂಡಿಸುವ ಸಾಧ್ಯತೆಗಳನ್ನು ವಿಸ್ತರಿಸುತ್ತಾ ಹೋದರು. ರಾಗದ ಜೊತೆಗಿನ ಅನುಸಂಧಾನವನ್ನು ತಾರಾನಾಥರು ಅತ್ಯಂತ ಅಪೂರ್ವ ಹಾಗೂ ಪ್ರಜಾಸತ್ತಾತ್ಮಕವಾದ ರೀತಿಯಲ್ಲಿ ಗ್ರಹಿಸಿಕೊಂಡಿದ್ದರು.

"ರಾಗದ ಮೇಲೆ ಪ್ರಭುತ್ವ ಸಾಧಿಸುವುದು ಅನ್ನೋದೆಲ್ಲಾ ನನಗೆ ಅರ್ಥ ಆಗಲ್ಲರೀ. ರಾಗದ ಜೊತೆ ನಿರಂತರವಾಗಿ ಗೆಳೆತನ ಬೆಳಸ್ಕೋತ, ಅದನ್ನು ಅರ್ಥಮಾಡಿಕೊಳ್ಳೋದು ಒಂದು ಪ್ರಕ್ರಿಯೆ. ರಾಗ ಒಂದು ವ್ಯಕ್ತಿ. ರಾಗದ ಜೊತೆಗಿನ ಸಾಂಗತ್ಯ ಅಂದರೆ ಒಬ್ಬ ವ್ಯಕ್ತಿಯನ್ನು ಮೊದಲ ಬಾರಿ ಭೇಟಿಯಾಗಿ ಹಲೋ ಹೇಳುವುದರಿಂದ ಪ್ರಾರಂಭಿಸಿ, ಕ್ರಮೇಣ ಆರಾಮಾಗಿ ಮೈಮನಗಳನ್ನು ಬಿಚ್ಚಿ ಅವರೊಡನೆ ಮುಕ್ತವಾಗಿ ಒಡನಾಡುವಂತೆ. ಇಂತಹ ಪರಿಚಯಗಳಲ್ಲಿ ಕೆಲವರಷ್ಟೇ ತುಂಬಾ ಆತ್ಮೀಯರಾಗುವಂತೆ, ಅಸಂಖ್ಯಾತ ರಾಗಗಳಲ್ಲಿ ಕೆಲವು ರಾಗಗಳು ಮಾತ್ರ ತುಂಬಾ ಆತ್ಮೀಯವಾಗುತ್ತವೆ. ಅವು ಯಾವಾಗಲೂ ನನ್ನ ಅಕ್ಕಪಕ್ಕದಲ್ಲೇ ಇರುತ್ತವೆ. ಅವುಗಳಿಗೆ ನಾನು ಗೊತ್ತು, ಮತ್ತು ನನಗೆ ಅವು ಗೊತ್ತು. ಅವುಗಳ ಬಳಿ ನನಗೊಂದಿಷ್ಟು ಸಲಿಗೆ ಸಾಧ್ಯ. ಹಾಗಂತ ಅವುಗಳ ವೈಶಿಷ್ಟ್ಯವನ್ನು ಬದಲಿಸಲು ನನಗೆ ಸಾಧ್ಯವಿಲ್ಲ. ಆದರೆ ಅವುಗಳನ್ನು ಆರಾಮವಾಗಿ ನುಡಿಸುವುದಕ್ಕೆ ನನಗೆ ಸಾಧ್ಯವಾಗುತ್ತೆ. ನಾನು ನುಡಿಸದೇ ಇರುವಾಗಲೂ ಅವು ನನ್ನ ಮನದೊಳಗೆ ಹಾಗೇ ಅಡ್ಡಾಡುತ್ತಿರುತ್ತವೆ. ರಾಗದ ವಿಸ್ತಾರ ಮತ್ತು ಅದರ ಸಾಧ್ಯತೆಗಳನ್ನು ಅರಿಯುವುದು ತುಂಬಾ ನಿಧಾನವಾದ, ಹಂತ ಹಂತವಾದ ಪ್ರಕ್ರಿಯೆ. ಅದು ಪರ್ವತಾರೋಹಣದಂತೆ. ಮೇಲೆ ಏರಿದಂತೆಲ್ಲಾ ಹೆಚ್ಚೆಚ್ಚು ಕಾಣಲು ಪ್ರಾರಂಭವಾಗುತ್ತದೆ. ರಾಗದಲ್ಲೂ ಹಾಗೆ ನೀವು ನಿಧಾನವಾಗಿ ಅದರ ಸೀಮೆಗಳನ್ನು ವಿಸ್ತರಿಸುತ್ತಾ ಹೋಗುತ್ತೀರಿ. ಆದರೆ ಅದು ಮುರಿಯದಂತೆ ಜಾಗ್ರತೆ ವಹಿಸಬೇಕು. ಕ್ರಮೇಣ ಆ ರಾಗದಲ್ಲಿ ಅಡಗಿರುವ ಅಪರಿಚಿತವಾದ ಮೂಲೆಗಳು, ಈ ತನಕ ನೋಡಿಲ್ಲದ ಜಾಗಗಳು ಕಾಣಿಸಲಾರಂಭಿಸುತ್ತದೆ. ನಿಮಗೆ ಸ್ವಲ್ಪ ತಾಳ್ಮೆ ಇದ್ದರೆ ರಾಗವನ್ನು ನಿಮ್ಮ ಜೊತೆಗೆ ಕರೆದುಕೊಂಡು ಹೋಗಬಹುದು. ಇನ್ನೂ ಸ್ವಲ್ಪ ಹೆಚ್ಚಿನ ತಾಳ್ಮೆ ಇದ್ದರೆ, ರಾಗವೇ ನಿಮ್ಮ ಜೊತೆ ಮಾತನಾಡಲು ಪ್ರಾರಂಭಿಸುತ್ತದೆ. ರಾಗವನ್ನು ಹೇಗೆ ಬೆಳೆಸಬೇಕು ಎನ್ನುವುದಕ್ಕೆ ನಮ್ಮ ಖಾನ್ ಸಾಹೇಬರು ಜೆನ್ ಗುರುವಿನಂತೆ ಹೇಳಿದ್ದರು, 'ರಾಗವೆಂಬ ಹಾದಿಯಲ್ಲಿ ನೀನು ನಡೆಯಲು ಪ್ರಾರಂಭಿಸಿದರೆ, ಆ ಹಾದಿಯೇ



ವಿಖ್ಯಾತ ಸರೋದ್ ಕಲಾವಿದ ಅಲಿ ಅಕ್ಬರ್ ಖಾನ್ ಅವರೊಂದಿಗೆ ರಾಜೀವ್ ತಾರಾನಾಥ್

ಮಾರ್ಗವನ್ನು ತೋರುತ್ತಾ ಹೋಗುತ್ತದೆ.'

ಆದರೆ ಹೆಚ್ಚು ಸಾಧಿಸಬೇಕು ಅನ್ನೋ ಬಯಕೆ ಇರಬೇಕು. "ಸಾಧಿಸೋದಕ್ಕೆ ರಿಯಾಜ್ ಬೇಕು. ನನ್ನ ತಲೆಯಲ್ಲಿ ಬಂದು ಹೋಗುವ ಎಲ್ಲಾ ಆಲೋಚನೆಗಳು ಕೈಯಲ್ಲಿ ಬರೋದಕ್ಕೆ ಸಾಧ್ಯ ಆಗಬೇಕು. ನನ್ನ ಮನಸ್ಸಿನ ಕಲ್ಪನೆಗಳು ಬೆರಳಿಗೆ ಬಂದು, ಬೆರಳುಗಳೇ ನನ್ನ